



ರೇಷ್ಮೆ ಸೀರೆಗೂ ಸಂಪೂರ್ಣ ಕಲಂಕಾರಿ ಅಥವಾ ವರ್ಲಿ ಚಿತ್ತಾರ ಇರುವ ರವಿಕೆಯು ಚಂದದ ಲುಕ್ ನೀಡುತ್ತದೆ.

## ಸೀರೆಗೆ ಹೊಸ ರೂಪ

ಸಾಂಪ್ರದಾಯಿಕ ಸೀರೆಗೆ ಆಧುನಿಕ ಟಚ್ ನೀಡಿ ಫ್ಯಾಷನ್ ಮೆರೆಯುವುದು ಇಂದು ನಿತ್ಯದ ಕಸರತ್ತೇ ಆಗಿದೆ. ಫ್ಯೂಷನ್ ಸೀರೆ ಮಾತ್ರವಲ್ಲದೆ ಪಾಕೆಟ್ ಸೀರೆ, ಧೋತಿ ಸೀರೆ, ಬೆಲ್ಟ್ ಸೀರೆ, ಟ್ವಿಸ್ಟೆಡ್ ಪಲ್ಲು ಸೀರೆ, ಅಂಗ್ರಕಾ ಸೀರೆ, ಕೇಪ್ ಸೀರೆ, ಜೀನ್ಸ್ ಸೀರೆ, ಡಬಲ್ ಡ್ರೇಪ್ ಸೀರೆ, ಗೌನ್ ಸೀರೆ, ಪ್ಯಾಂಟ್ ಸ್ಟೈಲ್ ಸೀರೆ, ರ‍್ಯಾಪ್ ಸೀರೆ... ಇವೆಲ್ಲವೂ ಫ್ಯಾಷನ್ ಸೀರೆಗಳ ಪಟ್ಟಿಯಲ್ಲಿ ಸೇರಿವೆ. ಇವೆಲ್ಲವುಗಳಿಗಿಂತ ಹೆಚ್ಚು ಜನಪ್ರಿಯತೆ ಗಳಿಸಿದ ಸೀರೆ ಎಂದರೆ ಅದು ಫ್ಯೂಷನ್ ಸೀರೆಯೇ.

ಫ್ಯೂಷನ್ ಸೀರೆಯಷ್ಟೇ ಖ್ಯಾತಿ ಪಡೆದ ಇನ್ನೊಂದು ವೈವಿಧ್ಯದ ಉಡುಪು ಎಂದರೆ ಅದು ಜಿಪ್‌ಸೂಟ್. ಈ ಮಾದರಿಯ ಉಡುಪಿನಲ್ಲಿ ಪ್ಯಾಂಟ್ ಹಾಗೂ ಟಾಪ್ ಎರಡೂ ಸೇರಿಕೊಂಡಿರುವ ಕಾರಣ ಇದಕ್ಕೆ ಜಂಪ್‌ಸೂಟ್ ಎಂದು ಕರೆಯಲಾಗುತ್ತದೆ. ಈ ಜಂಪ್‌ಸೂಟ್ ಜೊತೆಗೆ ಸೀರೆಯೂ ಸೇರಿಕೊಂಡರೆ ಅದು ಜಿಪ್‌ಸೂಟ್ ಎನಿಸಿಕೊಳ್ಳುತ್ತದೆ. ಸೀರೆ ಉಡಬೇಕೆಂಬ ತುಡಿತ, ಆದರೆ ಉಡುವ ಶೈಲಿ ತಿಳಿಯದು. ಇಂಥವರಿಗಾಗಿಯೇ ಸೀರೆಯ ಲುಕ್ ಅನ್ನೇ ನೀಡುವ ಈ ವಿನೂತನ ಮಾದರಿಯ ಜಿಪ್‌ಸೂಟ್ ಈಗ ಯುವತಿಯರ ಮನ ಗೆದ್ದಿದೆ. ಇದನ್ನು ಚಿಕ್ಕ ಹರೆಯದ ಹೆಣ್ಣುಮಕ್ಕಳೂ ಆರಾಮವಾಗಿ ಧರಿಸಬಹುದು. ಉಡುಪಿನಲ್ಲಿ ವೈವಿಧ್ಯ ಬಯಸುವ ಹುಡುಗಿಯರಿಗಾಗಿಯೇ ಈ ಶೈಲಿ ಅಸ್ತಿತ್ವಕ್ಕೆ ಬಂದಿದೆ ಎನ್ನಬಹುದು. ಈ ವಿಧಾನದಲ್ಲಿ ಸೀರೆಗೆ ನೆರಿಗೆ ಹಾಕಬೇಕಿಲ್ಲ, ಸಿದ್ಧಮಾದರಿಯ ಸೀರೆಯೇ ಆಗಿರುವುದರಿಂದ ಇದು ಸಖತ್ ಆಗಿ ಕಾಣುತ್ತದೆ.

ಇದರಲ್ಲಿ ತಿಳಿ ಬಣ್ಣಗಳು, ಗಾಢ ಬಣ್ಣ ಎರಡೂ ಈ ಶೈಲಿಗೆ ಚೆನ್ನಾಗಿಯೇ ಒಪ್ಪುತ್ತದೆ. ಫ್ಯೂಷನ್ ವಿನ್ಯಾಸ ಎನಿಸಿಕೊಂಡಿರುವುದರಿಂದ ದಿರಿಸಿನೊಂದಿಗೆ ಹೆಚ್ಚು ಒಡವೆಗಳನ್ನು ಧರಿಸುವ ಅಗತ್ಯ ಇಲ್ಲ. ಸ್ಟೈಲಿಷ್ ಆಗಿರುವ ಆ್ಯಕ್ಸೆಸರೀಸ್ ಅನ್ನು ಮಿತವಾಗಿ ಹಾಕಿಕೊಂಡರೆ ಸಾಕು.

ರೇಷ್ಮೆಯಲ್ಲೇ ಮಹಾರಾಣಿಯಂತೆ ಮೆರೆಯುವ ರೇಷ್ಮೆ ಸೀರೆಯನ್ನೂ ಫ್ಯೂಷನ್ ಮಾದರಿಯಾಗಿಸಿ ತೊಟ್ಟುಕೊಳ್ಳಬಹುದು. ಹೀಗೆ ಮಾಡಿಕೊಂಡರೆ ಇದನ್ನು ಮದುವೆ, ಮುಂಜಿ, ಗೃಹಪ್ರವೇಶದಂತಹ ಶುಭ ಸಮಾರಂಭಗಳಲ್ಲೂ ಉಟ್ಟುಕೊಳ್ಳಬಹುದು. ರೇಷ್ಮೆಯಲ್ಲಿ ಬನಾರಸಿ, ಚಂದೇರಿ, ಬಾಗಲ್ಪುರಿ, ಅಸ್ಸಾಂ ಸಿಲ್ಕ್, ಬೊಮ್ಕಾಯ್, ಮಂಗಳಗಿರಿ ಮುಂತಾದ ಸೀರೆಗಳು ಬಣ್ಣದಲ್ಲಿ, ವೈವಿಧ್ಯದಲ್ಲಿ, ವಿನ್ಯಾಸದಲ್ಲಿ ಪೈಪೋಟಿ ನೀಡುತ್ತಿದ್ದರೂ ಫ್ಯೂಷನ್ ಸೀರೆ ಎಲ್ಲವನ್ನೂ ಮೀರಿಸಿ ಅಗ್ರಸ್ಥಾನದಲ್ಲಿ ಟ್ರೆಂಡ್ ಸೃಷ್ಟಿಸಿದ್ದು ಮಾತ್ರ ಸತ್ಯಸ್ಯ ಸತ್ಯ.